# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿ.ಇ/936/2017//ಎಆರ್‌ಇ-10.

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 16/03/2022.

## ವಿಚಾರಣಾ ವರದಿ

**ಉಪಸ್ಥಿತರು:** ಜಿ. ನಂಜುಂಡಯ್ಯ, ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ-1 ಶ್ರೀ **ಮಹಾಲಿಂಗ,** ವಾಹನ ಚಾಲಕರು, ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ನಾಗಮಂಗಲ ತಾಲ್ಲೂಕು ಪಂಚಾಯತ್, ಮಂಡ್ಯ ಜಿಲ್ಲೆ **ಆ.ಸ.ನೌ-2** ಶ್ರೀ **ಪಿ.ಎಸ್. ಪುಟ್ಟೇಗೌಡ,** ಹಿಂದಿನ ಕಾರ್ಯದರ್ಶಿ, ಜವರನಹಳ್ಳಿ ಗ್ರಾಮ ಪಂಚಾಯತ್, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (ಏಕತರ್ಫಿ) ಮತ್ತು **ಆ.ಸ.ನೌ-3** ಶ್ರೀ **ಕೆ.ಸಿ. ಕೃಷ್ಣ,** ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (**quashed and closed**) ರವರುಗಳ ವಿರುದ್ಧದ ಇಲಾಖಾ ವಿಚಾರಣೆಯ ಕುರಿತು.

**ಉಲ್ಲೇಖ:** **1.ಕಂಪ್ಲೆಂಟ್/ಉಪಲೋಕ್/ಎಂವೈಎಸ್-226/2013 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 09/01/2017.**
2.ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/54/ವಿಸೇಬಿ/2017 ಬೆಂಗಳೂರು, ದಿನಾಂಕ: 28/04/2017.
3.ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ-936/2017, ಬೆಂಗಳೂರು ದಿನಾಂಕ: 10.08.2017.

* * * *

1) ಗೌರವಾನ್ವಿತ ಉಪಲೋಕಾಯುಕ್ತ ರವರ ಆದೇಶ ಸಂಖ್ಯೆ. ಉಪಲೋಕ್-2/ಡಿಇ/936/2017, ಬೆಂಗಳೂರು, ದಿನಾಂಕ : 10.8.2017ರಂತೆ, (1) ಶ್ರೀ ಮಹಾಲಿಂಗ, ವಾಹನ ಚಾಲಕರು, ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ನಾಗಮಂಗಲ ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ,

(2) **ಶ್ರೀ ಪಿ.ಎಸ್.ಪುಟ್ಟೇಗೌಡ,** ಹಿಂದಿನ ಕಾರ್ಯದರ್ಶಿ, ಜವರನಹಳ್ಳಿ ಗ್ರಾಮ ಪಂಚಾಯತ್, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ಮತ್ತು (3) **ಶ್ರೀ ಕೆ.ಸಿ. ಕೃಷ್ಣ,** ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಕ್ರಮವಾಗಿ 1 ರಿಂದ 3 ಎಂದು ಸಂಭೋದಿಸಲಾಗುವ) ಇವರ ವಿರುದ್ಧ ದೋಷಾರೋಪಣೆ ತಯಾರು ಮಾಡಿ, ಜಾರಿ ಮಾಡಿ, ಇಲಾಖಾ ವಿಚಾರಣೆ ಮಾಡಿ ವರದಿ ಸಲ್ಲಿಸಲು ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಿದ್ದು, ಆದರೆ, **ಆಪಾದಿತ ಸರ್ಕಾರಿ ನೌಕರ-3 ಶ್ರೀ ಕೆ.ಸಿ. ಕೃಷ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆರವರು ಸರ್ಕಾರಿ ಆದೇಶದ ವಿರುದ್ಧ ತಡೆಯಾಜ್ಞೆ ಪಡೆದಿರುವುದರಿಂದ ಸದರಿಯವರ ವಿರುದ್ಧ ದೋಷಾರೋಪಣೆಯನ್ನು ತಯಾರಿಸಿರುವುದಿಲ್ಲ,** ಆದ್ದರಿಂದ, ಅಪರ ನಿಬಂಧಕರು ವಿಚಾರಣೆಗಳು-10, ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರುಗಳ ವಿರುದ್ಧ ಮಾಡಲಾದ ದೋಷಾರೋಪಣೆಯು ಇರುತ್ತದೆ.

2) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌ-1 ರಿಂದ 3 ರವರುಗಳ ವಿರುದ್ಧ ದೋಷಾರೋಪಣೆ (Article of charges) ಅನ್ನು ಅಪರ ನಿಬಂಧಕರು, ವಿಚಾರಣೆಗಳು-10 ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು **ಆ.ಸ.ನೌ-1 ರಿಂದ 3** ರವರುಗಳಿಗೆ ದಿನಾಂಕ 02/11/2017 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

***ಅನುಬಂಧ-1***

***ದೋಷಾರೋಪಣೆ-1***

1ನೇ ಆಪಾದಿತ ಸರ್ಕಾರಿ ನೌಕರರಾದ **ಶ್ರೀ ಮಹಾಲಿಂಗ,** ವಾಹನ ಚಾಲಕರು, ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ನಾಗಮಂಗಲ ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, ಮತ್ತು 2ನೇ ಆಪಾದಿತ ಸರ್ಕಾರಿ ನೌಕರರಾದ **ಶ್ರೀ ಪಿ.ಎಸ್.ಪುಟ್ಟೇಗೌಡ,** ಹಿಂದಿನ ಕಾರ್ಯದರ್ಶಿ, ಜವರನಹಳ್ಳಿ ಗ್ರಾಮ ಪಂಚಾಯತ್, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, ಈ ಕೆಳಕಂಡ ಕರ್ತವ್ಯಲೋಪವನ್ನು ಎಸಗಿರುತ್ತೀರಿ :-

ನಾಗಮಂಗಲ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ವೆ ನಂ. 40ರಲ್ಲಿ 5 ಎಕರೆ ಜಾಗವನ್ನು ಗುಡಿಸಲು ನಿರ್ಮಿಸುವವರಿಗೆ ನೀಡಲು ಜಿಲ್ಲಾಧಿಕಾರಿಯವರು ದಿನಾಂಕ: 07/02/2005 ರಂದು ಆದೇಶ ಮಾಡಿರುತ್ತಾರೆ ಮತ್ತು ಅದರಂತೆ ತಹಶೀಲ್ದಾರ್ ರವರು ಸದರಿ ಜಮೀನಿನಲ್ಲಿ ಗುಡಿಸಲನ್ನು ನಿರ್ಮಿಸುವವರಿಗೆ ಪಹಣಿಯನ್ನು ಮಾಡಿದ್ದಾರೆ. **1ನೇ ಆಪಾದಿತ ಸರ್ಕಾರಿ ನೌಕರರಾದ ನೀವು** ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದರೂ ಸಹ, ನಿಮ್ಮ ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀರವರಿಗೆ, ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರಿಗೆ ಹಾಗೂ ಶ್ರೀ ಎಂ.ಜಿ.ಸುಂದರ್ ರಾಜ್ ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರಿಗೆ ಶ್ರೀ ಡಿ.ಬಿ.ಚಂದ್ರಶೇಖರಯ್ಯರವರು ದಿನಾಂಕ: 12/08/2005 ರಲ್ಲಿ ಹಕ್ಕು ಪತ್ರಗಳನ್ನು ನೀಡುವ ಮೂಲಕ ಕರ್ತವ್ಯ ಲೋಪವೆಸಗಿರುತ್ತೀರಿ.

1ನೇ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ನೌಕರರಾಗಿದ್ದರೂ ಸಹಾ, ನಿಮ್ಮ ಪತ್ನಿ ಶ್ರೀಮತಿ ಜಯಲಕ್ಷ್ಮೀರವರು 2ನೇ ಆಪಾದಿತ ಸರ್ಕಾರಿ ನೌಕರರಿಗೆ ದಿನಾಂಕ: 20/06/2008 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಅವರಿಗೆ ಹಕ್ಕು ಪತ್ರ ನೀಡಲಾಗಿರುವ ನಿವೇಶನ ಸಂಖ್ಯೆ: 74ಕ್ಕೆ ಖಾತೆ ಮಾಡಿಕೊಡಬೇಕಾಗಿ ಕೋರಿರುತ್ತಾರೆ. ಇದರಿಂದ 1ನೇ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ನೌಕರರಾಗಿದ್ದು ಕೊಂಡು ನಿಮ್ಮ ಪತ್ನಿಯ ಮುಖಾಂತರ 2ನೇ ಆಪಾದಿತ ಸರ್ಕಾರಿ ನೌಕರರಿಗೆ ಅರ್ಜಿ ಸಲ್ಲಿಸುವ ಮೂಲಕ ಖಾತೆ ಮಾಡಿಸಿಕೊಂಡು ಕರ್ತವ್ಯ ಲೋಪವೆಸಗಿರುತ್ತೀರಿ.

2ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಪಿ.ಎಸ್.ಪುಟ್ಟೇಗೌಡರವರು 1ನೇ ಆಪಾದಿತ ಸರ್ಕಾರಿ ನೌಕರರ ಪತ್ನಿ, ಶ್ರೀ. ಮಂಜುನಾಥ್ ಮತ್ತು ಶ್ರೀ. ಎಂ.ಜಿ. ಸುಂದರ್ ರಾಜುರವರುಗಳ ಪತ್ನಿಯರು ಖಾತೆ ಮಾಡಿಕೊಡುವಂತೆ ಕೋರಿ ಸಲ್ಲಿಸಿದ ಅರ್ಜಿಯನ್ನು ಕೂಲಂಕಷವಾಗಿ ಪರಿಶೀಲಿಸದೇ, ಕಾನೂನು ಬಾಹಿರವಾಗಿ ಕರನಿರ್ಧರಣಾ ಡಿಮ್ಯಾಂಡ್ ಪಟ್ಟಿಯ ನಮೂನೆಯ ಮುದ್ರಿತವಲ್ಲದ ರೋಲ್ಡ್

21/6/13

ಹಾಳೆಯನ್ನು ಬಳಸಿ ಬೊಮ್ಮೇನಹಳ್ಳಿ ಗ್ರಾಮಕ್ಕೆ ಸೇರಿಸಿ 337ರಲ್ಲಿ 1ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಹಾಲಿಂಗ ರವರ ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀ ರವರಿಗೆ, 355ರಲ್ಲಿ ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರಿಗೆ ಹಾಗೂ 373ರಲ್ಲಿ ಶ್ರೀ ಎಂ.ಜಿ.ಸುಂದರ್ ರಾಜ್‌ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರಿಗೆ ಖಾತೆ ವರ್ಗಾವಣೆ ಮಾಡುವ ಮೂಲಕ ಕರ್ತವ್ಯ ಲೋಪವೆಸಗಿರುತ್ತೀರಿ.

ಆದಕಾರಣ 1 ಮತ್ತು 2ನೇ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ (3)(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## *ಅನುಬಂಧ-2*

## ದೋಷಾರೋಪಣೆಯ ವಿವರ

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

3. ಶ್ರೀ ಬಿ.ಆರ್.ರವಿಚಂದ್ರ ಬಿನ್ ಲೇಟ್ ರಂಗಪ್ಪ, ಬೊಮ್ಮನಹಳ್ಳಿ ಗ್ರಾಮ, ಬೇಲೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀ ಮಹಾಲಿಂಗ, ವಾಹನ ಚಾಲಕರು, ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ನಾಗಮಂಗಲ ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, (2) ಶ್ರೀ ಮಂಜುನಾಥ್, ಬಿಲ್ ಕಲೆಕ್ಟರ್, ನೆಲ್ಲಿಗೆರೆ ಗ್ರಾಮ ಪಂಚಾಯತ್, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, (3) ಶ್ರೀ ಎಂ.ಜಿ. ಸುಂದರ್ ರಾಜು, ಶಿಕ್ಷಕರು, ಸರ್ಕಾರಿ ಶಾಲೆ, ಬೆಳ್ಳೂರು ಗ್ರಾಮ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, (4) ಶ್ರೀ ಪಿ.ಎಸ್.ಪುಟ್ಟೇಗೌಡ, ಹಿಂದಿನ ಕಾರ್ಯದರ್ಶಿ, ಜವರನಹಳ್ಳಿ ಗ್ರಾಮ ಪಂಚಾಯತ್, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, (5) ಶ್ರೀ ಡಿ.ಬಿ.ಚಂದ್ರಶೇಖರಯ್ಯ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ನಾಗಮಂಗಲ

ತಾಲ್ಲೂಕು, ಮಂಡ್ಯ ಜಿಲ್ಲೆ (ಹಾಲಿ ನಿವೃತ್ತಿ: ನಂ. 15, 2ನೇ ಕ್ರಾಸ್, ಗಣಪತಿ ದೇವಸ್ಥಾನದ ರಸ್ತೆ, ವಿದ್ಯಾನಗರ, ಮೈಸೂರು) ಮತ್ತು, (6) ಶ್ರೀ ಕೆ.ಸಿ.ಕೃಷ್ಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (ಹಾಲಿ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ) ರವರ ವಿರುದ್ಧ ದಾಖಲಿಸಿ ನಾಗಮಂಗಲ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ವೆ ನಂ. 40ರಲ್ಲಿ 5 ಎಕರೆ ಜಾಗವನ್ನು ಗುಡಿಸಲು ನಿರ್ಮಿಸುವವರಿಗೆ ನೀಡಲು ಜಿಲ್ಲಾಧಿಕಾರಿಯವರು ದಿನಾಂಕ: 07/02/2005 ರಂದು ಆದೇಶ ಮಾಡಿರುತ್ತಾರೆ ಮತ್ತು ಅದರಂತೆ ತಹಶೀಲ್ದಾರ್ ರವರು ಸದರಿ ಜಮೀನಿನಲ್ಲಿ ಗುಡಿಸಲನ್ನು ನಿರ್ಮಿಸುವವರಿಗೆ ಪಹಣಿಯನ್ನು ಮಾಡಿದ್ದಾರೆ. ಆದರೆ ಶ್ರೀ. ಡಿ.ಬಿ. ಚಂದ್ರಶೇಖರಯ್ಯರವರು ಗುಡಿಸಲು ನಿರ್ಮಿಸುವವರಿಗೆ ಹಕ್ಕು ಪತ್ರಗಳನ್ನು ನೀಡದೇ ನಿಯಮಗಳನ್ನು ಉಲ್ಲಂಘಿಸಿ 1ನೇ ಆಪಾದಿತ ಸರ್ಕಾರಿ ನೌಕರರ ಪತ್ನಿಯವರಿಗೆ, ಶ್ರೀ. ಮಂಜುನಾಥ್ ಮತ್ತು ಶ್ರೀ. ಎಂ.ಜಿ. ಸುಂದರ್ ರಾಜುರವರ ಪತ್ನಿಯರಿಗೆ ಹಾಗೂ ಶ್ರೀಮಂತ ಮತ್ತು ರಾಜಕಾರಣಿ ಜನಗಳಿಗೆ ಹಕ್ಕು ಪತ್ರಗಳನ್ನು ನೀಡಿರುತ್ತಾರೆ. ಆ ರೀತಿ ಹಕ್ಕು ಪತ್ರಗಳನ್ನು ನೀಡಿದ ಮೇಲೆ 2ನೇ ಆಪಾದಿತ ಸರ್ಕಾರಿ ನೌಕರರು ನಿಯಮಗಳನ್ನು ಉಲ್ಲಂಘಿಸಿ ಅಕ್ರಮ ಖಾತೆಗಳನ್ನು ಮಾಡಿರುತ್ತಾರೆ. ಶ್ರೀ. ಕೆ.ಸಿ. ಕೃಷ್ಣರವರು ಸದರಿ ಸರ್ವೆ ನಂ. 40ರಲ್ಲಿ ಹಲವಾರು ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸ ಇರುವ ಜನರಿಗೆ ತೊಂದರೆ ನೀಡುತ್ತಿದ್ದಾರೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

4. ದೂರುದಾರರ ದೂರಿಗೆ ಸಂಬಂಧಿಸಿದಂತೆ, ಹಾಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ನಾಗಮಂಗಲ ರವರು ದಿನಾಂಕ: 18/04/2015ರ ಪತ್ರದ ರೀತ್ಯಾ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ, ದಿನಾಂಕ: 18/04/2015 ರಂದು ಖುದ್ದಾಗಿ ಗ್ರಾಮ ಪಂಚಾಯತಿಗೆ ಬೇಟಿ ನೀಡಿ ಕಡತಗಳನ್ನು ಪರಿಶೀಲಿಸಲಾಗಿ 1ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಹಾಲಿಂಗ ರವರ ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀ ರವರಿಗೆ, ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರಿಗೆ ಹಾಗೂ ಶ್ರೀ ಎಂ.ಜಿ.ಸುಂದರ್ ರಾಜ್ ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರಿಗೆ ಶ್ರೀ ಚಂದ್ರಶೇಖರ್ ರವರು ದಿನಾಂಕ: 12/08/2005 ರಲ್ಲಿ ಹಕ್ಕು ಪತ್ರಗಳನ್ನು ನೀಡಿರುತ್ತಾರೆಂದು, ಅದರ ವಿವರ ಈ ಕೆಳಕಂಡಂತೆ ಇರುತ್ತದೆಂದು ತಿಳಿಸಿರುತ್ತಾರೆ.

5. ಈ ಮೇಲ್ಕಂಡ ನಿವೇಶನದಾರರಾದ ಅಂದರೆ 1ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಹಾಲಿಂಗ ರವರ ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀ ರವರು ದಿನಾಂಕ: 20/06/2008 ರಂದು, ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರು ದಿನಾಂಕ: 20/06/2008 ರಂದು ಹಾಗೂ ಶ್ರೀ ಎಂ.ಜಿ.ಸುಂದರ್ ರಾಜ್ ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರು ದಿನಾಂಕ: 09/08/2008 ರಂದು ನೀಡಿರುವ ಅರ್ಜಿಯ ಮೇರೆಗೆ ಅಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಕರನಿರ್ಧರಣಾ ಡಿಮ್ಯಾಂಡ್ ಪಟ್ಟಿಯ ನಮೂನೆಯ ಮುದ್ರಿತವಲ್ಲದ ರೋಲ್ಡ್ ಹಾಳೆಯನ್ನು ಬಳಸಿ ಬೊಮ್ಮೇನಹಳ್ಳಿ ಗ್ರಾಮಕ್ಕೆ ಸೇರಿಸಿ 337ರಲ್ಲಿ 1ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಹಾಲಿಂಗ ರವರ ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀ ರವರಿಗೆ, 355ರಲ್ಲಿ ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರಿಗೆ ಹಾಗೂ 373ರಲ್ಲಿ ಶ್ರೀ ಎಂ.ಜಿ.ಸುಂದರ್ ರಾಜ್ ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರಿಗೆ ಖಾತೆ ಸಂಖ್ಯೆಗೆ ವರ್ಗಾವಣೆ ಮಾಡಿ ಅಂದಿನಿಂದ 2014-15ನೇ ಸಾಲಿನವರೆಗೆ ಕರನಿರ್ಧರಣ ಪಟ್ಟಿಯಲ್ಲಿ 3 ಜನ ಖಾತೆದಾರರ ಹೆಸರು ಚಾಲ್ತಿಯಲ್ಲಿರುತ್ತದೆಂದು ತಿಳಿಸಿರುತ್ತಾರೆ. ಮತ್ತೆ ಮುಂದುವರೆದು 1ನೇ ಆಪಾದಿತ ಸರ್ಕಾರಿ ನೌಕರರನ್ನು ಮತ್ತು ಶ್ರೀ. ಎಂ.ಜಿ. ಸುಂದರ್ ರಾಜುರವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿ ವಿಚಾರಿಸಲಾಗಿ, ಸದರಿಯವರು ಮೇಲ್ಕಂಡ ಪ್ರಶ್ನಿತ ಹಕ್ಕು ಪತ್ರವನ್ನು ಪಡೆಯುವುದಕ್ಕಾಗಲೀ ಅಥವಾ ಖಾತೆ ಮಾಡಿಕೊಡಲು ಅರ್ಜಿಯನ್ನಾಗಲೀ ಅವರ ಪತ್ನಿಯರ ಮುಖಾಂತರ ಯಾವುದೇ ಅರ್ಜಿಯನ್ನು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆಂದು ಹೇಳಿರುತ್ತಾರೆ. ಇದು ಅಲ್ಲದೇ, ಶ್ರೀ. ಮಂಜುನಾಥ್ ಹಾಲಿ ನಲ್ಲಿಗೆರೆ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರು ಬೊಮ್ಮೇನಹಳ್ಳಿ ಗ್ರಾಮದ ಸರ್ವೆ ನಂ. 40ರಲ್ಲಿ ನಿವೇಶನ ಪಡೆದಿರುವುದನ್ನು ಒಪ್ಪಿಕೊಂಡಿದ್ದು ಹಾಲಿ ಅನುಭವದಲ್ಲಿರುತ್ತದೆಂದು ತಿಳಿಸಿರುತ್ತಾರೆಂದು ಹಾಗೂ ಗ್ರಾಮ ಪಂಚಾಯತಿ ದಾಖಲೆಯಲ್ಲಿ ಇದುವರೆವಿಗೂ ಶ್ರೀಮತಿ ಬಿ.ಸವಿತಾ ಬಿನ್ ಮಂಜುನಾಥ್ ರವರ ಹೆಸರಿನಲ್ಲಿ ದಾಖಲೆ ಲಭ್ಯವಿರುತ್ತದೆಂದು ತಿಳಿಸಿರುತ್ತಾರೆ.

6. ದೂರುದಾರರ ದೂರಿಗೆ ಸಂಬಂಧಪಟ್ಟಂತೆ 1ನೇ ಆಪಾದಿತ ಸರ್ಕಾರಿ ನೌಕರರು, ಶ್ರೀ. ಮಂಜುನಾಥ್ ಮತ್ತು ಶ್ರೀ. ಎಂ.ಜಿ. ಸುಂದರ್ ರಾಜುರವರು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ತಾವು ಯಾವುದೇ ಹಕ್ಕು ಪತ್ರವನ್ನು ಹಾಗೂ ಖಾತೆಯನ್ನು ಪಡೆಯುವ ಸಲುವಾಗಿ ತಮ್ಮ ಪತ್ನಿಯರ ಮುಖಾಂತರ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

7. 2ನೇ ಆಪಾದಿತ ಸರ್ಕಾರಿ ನೌಕರರಾದ-ಶ್ರೀ ಪಿ.ಎಸ್.ಪುಟ್ಟೇಗೌಡ, ಹಿಂದಿನ ಕಾರ್ಯದರ್ಶಿ, ಜವರನಹಳ್ಳಿ ಗ್ರಾಮ ಪಂಚಾಯತ್, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, ರವರು ಈ ಕಛೇರಿಯಿಂದ ಕಳುಹಿಸಲಾದ ಪತ್ರವನ್ನು ಸ್ವೀಕರಿಸಿದರೂ ಸಹಾ, ಯಾವುದೇ ಆಕ್ಷೇಪಣೆಯನ್ನು ಸಲ್ಲಿಸದೇ ಇರುವುದರಿಂದ 2ನೇ ಆಪಾದಿತ ಸರ್ಕಾರಿ ನೌಕರರಿಗೆ ದೂರುದಾರರ ದೂರಿನ ಮೇಲೆ ಏನು ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ಗೌರವಾನ್ವಿತ ಉಪಲೋಕಾಯುಕ್ತರ ಕಂಡಿಕೆ 61ರ ಆದೇಶದ ಮೇರೆಗೆ 2ನೇ ಆಪಾದಿತ ಸರ್ಕಾರಿ ನೌಕರ ಆಕ್ಷೇಪಣೆಗಳೇನು ಇರುವುದಿಲ್ಲವೆಂದು ಪರಿಗಣಿಸಲಾಗಿದೆ.

8. ದಿನಾಂಕ: 19/01/2015 ರಂದು ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರತ್ಯುತ್ತರದಲ್ಲಿ, ಆಪಾದಿತ ಸರ್ಕಾರಿ ನೌಕರರು ಸಲ್ಲಿಸಿರುವ ಆಕ್ಷೇಪಣೆಯನ್ನು ಅಲ್ಲಗಳೆಯುತ್ತಾ, ದೂರಿನಲ್ಲಿನ ಅಂಶಗಳನ್ನೇ ಪುನರಾವರ್ತನೆ ಮಾಡಿರುತ್ತಾರೆ.

9. ದೂರಿನಲ್ಲಿ ಇರುವ ಆಪಾದನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ 1 ಮತ್ತು 2ನೇ ಆಪಾದಿತ ಸರ್ಕಾರಿ ನೌಕರರು ಈ ಕೆಳಕಂಡಂತೆ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

> ನಾಗಮಂಗಲ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ವೆ ನಂ. 40ರಲ್ಲಿ 5 ಎಕರೆ ಜಾಗವನ್ನು ಗುಡಿಸಲು ನಿರ್ಮಿಸುವವರಿಗೆ ನೀಡಲು ಜಿಲ್ಲಾಧಿಕಾರಿಯವರು ದಿನಾಂಕ: 07/02/2005 ರಂದು ಆದೇಶ ಮಾಡಿರುತ್ತಾರೆ ಮತ್ತು ಅದರಂತೆ ತಹಶೀಲ್ದಾರ್ ರವರು ಸದರಿ ಜಮೀನಿನಲ್ಲಿ ಗುಡಿಸಲನ್ನು ನಿರ್ಮಿಸುವವರಿಗೆ ಪಹಣಿಯನ್ನು ಮಾಡಿದ್ದಾರೆ.
>
> 1ನೇ ಆಪಾದಿತ ಸರ್ಕಾರಿ ನೌಕರರು ಸರ್ಕಾರಿ/ಸಾರ್ವಜನಿಕ ನೌಕರರಾಗಿರುತ್ತಾರೆ. ಹೀಗಿದ್ದರೂ ಸಹಾ, 1ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಹಾಲಿಂಗ ರವರು ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀರವರಿಗೆ, ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರಿಗೆ ಹಾಗೂ ಶ್ರೀ ಎಂ.ಜಿ.ಸುಂದರ್ ರಾಜ್ ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರಿಗೆ ಶ್ರೀ ಡಿ.ಬಿ.ಚಂದ್ರಶೇಖರಯ್ಯ ರವರು ದಿನಾಂಕ: 12/08/2005 ರಲ್ಲಿ ಹಕ್ಕು ಪತ್ರಗಳನ್ನು ನೀಡುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಲ 16/7

1ನೇ ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ನೌಕರರಾಗಿದ್ದರೂ ಸಹಾ, ಅವರ ಪತ್ನಿ ಶ್ರೀಮತಿ ಜಯಲಕ್ಷ್ಮೀರವರು 2ನೇ ಆಪಾದಿತ ಸರ್ಕಾರಿ ನೌಕರರಿಗೆ ದಿನಾಂಕ: 20/06/2008 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಅವರಿಗೆ ಹಕ್ಕು ಪತ್ರ ನೀಡಲಾಗಿರುವ ನಿವೇಶನ ಸಂಖ್ಯೆ: 74ಕ್ಕೆ ಖಾತೆ ಮಾಡಿಕೊಡಬೇಕಾಗಿ ಕೋರಿರುತ್ತಾರೆ. ಇದರಿಂದ 1ನೇ ಆಪಾದಿತ ಸರ್ಕಾರಿ ನೌಕರರು ಸರ್ಕಾರಿ ನೌಕರರಾಗಿದ್ದು ಕೊಂಡು ಅವರ ಪತ್ನಿಯ ಮುಖಾಂತರ 2ನೇ ಆಪಾದಿತ ಸರ್ಕಾರಿ ನೌಕರರಿಗೆ ಅರ್ಜಿ ಸಲ್ಲಿಸುವ ಮೂಲಕ ಖಾತೆ ಮಾಡಿಸಿಕೊಂಡು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಶ್ರೀ. ಮಂಜುನಾಥ್‌ರವರು ಗ್ರಾಮ ಪಂಚಾಯತಿಯಲ್ಲಿ ಬಿಲ್ ಕಲೆಕ್ಟರ್ ಆಗಿದ್ದುಕೊಂಡು, ಅವರ ಪತ್ನಿ ಶ್ರೀಮತಿ ಸವಿತಾ ರವರು 2ನೇ ಆಪಾದಿತ ಸರ್ಕಾರಿ ನೌಕರರಿಗೆ ದಿನಾಂಕ: 20/06/2008 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಅವರಿಗೆ ಹಕ್ಕು ಪತ್ರ ನೀಡಲಾಗಿರುವ ನಿವೇಶನ ಸಂಖ್ಯೆ: 68ಕ್ಕೆ ಖಾತೆ ಮಾಡಿಕೊಡಬೇಕಾಗಿ ಕೋರಿರುತ್ತಾರೆ. ಇದರಿಂದ ಶ್ರೀ. ಮಂಜುನಾಥ್‌ರವರು ಗ್ರಾಮ ಪಂಚಾಯತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರೂ ಸಹಾ, ಅವರ ಪತ್ನಿಯ ಮುಖಾಂತರ 2ನೇ ಆಪಾದಿತ ಸರ್ಕಾರಿ ನೌಕರರಿಗೆ ಅರ್ಜಿ ಸಲ್ಲಿಸುವ ಮೂಲಕ ಖಾತೆ ಮಾಡಿಸಿಕೊಂಡು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಶ್ರೀ. ಎಂ.ಜಿ. ಸುಂದರ್ ರಾಜುರವರು ಸರ್ಕಾರಿ ನೌಕರರಾಗಿದ್ದರೂ ಸಹಾ, ಅವರ ಪತ್ನಿ ಶ್ರೀಮತಿ ಡಿ.ಎನ್.ಶೋಭಾ ರವರು 2ನೇ ಆಪಾದಿತ ಸರ್ಕಾರಿ ನೌಕರರಿಗೆ ದಿನಾಂಕ: 09/10/2008 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ಅವರಿಗೆ ಹಕ್ಕು ಪತ್ರ ನೀಡಲಾಗಿರುವ ನಿವೇಶನ ಸಂಖ್ಯೆ: 66ಕ್ಕೆ ಖಾತೆ ಮಾಡಿಕೊಡಬೇಕಾಗಿ ಕೋರಿರುತ್ತಾರೆ. ಇದರಿಂದ ಶ್ರೀ. ಎಂ.ಜಿ. ಸುಂದರ್ ರಾಜುರವರು ಸರ್ಕಾರಿ ನೌಕರರಾಗಿದ್ದು ಕೊಂಡು ಅವರ ಪತ್ನಿಯ ಮುಖಾಂತರ 2ನೇ ಆಪಾದಿತ ಸರ್ಕಾರಿ ನೌಕರರಿಗೆ ಅರ್ಜಿ ಸಲ್ಲಿಸುವ ಮೂಲಕ ಖಾತೆ ಮಾಡಿಸಿಕೊಂಡು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

2ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಪಿ.ಎಸ್.ಮುಟ್ಟೇಗೌಡರವರು 1ನೇ ಆಪಾದಿತ ಸರ್ಕಾರಿ ನೌಕರರ ಪತ್ನಿ, ಶ್ರೀ. ಮಂಜುನಾಥ್ ಮತ್ತು ಶ್ರೀ. ಎಂ.ಜಿ. ಸುಂದರ್ ರಾಜುರವರುಗಳ ಪತ್ನಿಯರು ಖಾತೆ ಮಾಡಿಕೊಡುವಂತೆ ಕೋರಿ ಸಲ್ಲಿಸಿದ ಅರ್ಜಿಯನ್ನು ಕೂಲಂಕಷವಾಗಿ ಪರಿಶೀಲಿಸದೇ, ಕಾನೂನು ಬಾಹಿರವಾಗಿ ಕರನಿರ್ಧರಣಾ ಡಿಮ್ಯಾಂಡ್ ಪಟ್ಟಿಯ ನಮೂನೆಯ ಮುದ್ರಿತವಲ್ಲದ ರೋಲ್ಡ್ ಹಾಳೆಯನ್ನು ಬಳಸಿ ಬೊಮ್ಮೇನಹಳ್ಳಿ ಗ್ರಾಮಕ್ಕೆ ಸೇರಿಸಿ 337ರಲ್ಲಿ 1ನೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಮಹಾಲಿಂಗ ರವರ ಪತ್ನಿಯಾದ ಶ್ರೀಮತಿ ಜಯಲಕ್ಷ್ಮೀ ರವರಿಗೆ, 355ರಲ್ಲಿ ಶ್ರೀ ವಿ.ಎನ್.ಮಂಜುನಾಥ್ ರವರ ಪತ್ನಿಯಾದ ಶ್ರೀಮತಿ ಬಿ.ಸವಿತಾ ರವರಿಗೆ ಹಾಗೂ 373ರಲ್ಲಿ ಶ್ರೀ ಎಂ.ಜಿ.ಸುಂದರ್ ರಾಜ್‌ರವರ ಪತ್ನಿಯಾದ ಶ್ರೀಮತಿ ಡಿ.ಎನ್.ಶೋಭಾ ರವರಿಗೆ ಖಾತೆ ವರ್ಗಾವಣೆ ಮಾಡುವ ಮೂಲಕ ಕರ್ತವ್ಯ ಲೋಪವೆಸಗಿರುವುದು ಕಂಡುಬರುತ್ತದೆ.

10. ದೂರುದಾರರು ದೂರು ಹಾಗೂ ಲಗತ್ತಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಮೇಲ್ನೋಟಕ್ಕೆ '1 ಮತ್ತು 2ನೇ ಆಪಾದಿತ ಸರ್ಕಾರಿ ನೌಕರರ' ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರಿಯುವುದು ಅಗತ್ಯ ಎಂದು ಕಂಡುಬಂದಿದ್ದು, '1 ಮತ್ತು 2ನೇ ಆಪಾದಿತ ಸರ್ಕಾರಿ ನೌಕರರು' ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

11. ಆದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, '1 ಮತ್ತು 2ನೇ ಆಪಾದಿತ ಸರ್ಕಾರಿ ನೌಕರರು' ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ '1 ಮತ್ತು 2ನೇ ಆಪಾದಿತ ಸರ್ಕಾರಿ ನೌಕರರ' ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎರ ಅಡಿಯಲ್ಲಿ ಆಪಾದಿತ ಸರ್ಕಾರಿ ನೌಕರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿ, 1 ಮತ್ತು 2ನೇ ಆಪಾದಿತ ಸರ್ಕಾರಿ ನೌಕರರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು

ಪ್ರಾಧಿಕಾರಿಯಾದ ಸರ್ಕಾರ ಉಲ್ಲೇಖ (2)ರ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು ವಿಚಾರಣೆಗಳು 10 ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. ಆದ್ದರಿಂದ, **ನಿಮ್ಮಗಳ ವಿರುದ್ಧ ಈ ಮೇಲ್ಕಂಡ ಆಪಾದನೆ.**

3) ಈ ಮೇಲ್ಕಂಡ ದೋಷಾರೋಪಣೆ (Article of charge)ಅನ್ನು ಆ.ಸ.ನೌ–1 ರಿಂದ 2 ರವರುಗಳಿಗೆ ಕಳುಹಿಸಿದ್ದು, ಆ.ಸ.ನೌ–1 ಮತ್ತು 2 ರವರುಗಳಿಗೆ ಜಾರಿಯಾಗಿದ್ದು, ಆ.ಸ.ನೌ–3 ರವರಿಗೆ ದೋಷಾರೋಪಣಾ ಪಟ್ಟಿ ತಯಾರು ಮಾಡಿರುವುದಿಲ್ಲ. ದಿನಾಂಕ 20/11/2017 ರಂದು ಆ.ಸ.ನೌ–2 ರವರು ಮತ್ತು ದಿನಾಂಕ 28/12/2017 ರಂದು ಆ.ಸ.ನೌ–1 ರವರು ಈ ವಿಚಾರಣಾ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಅವರುಗಳ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ–11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ–1 ಮತ್ತು 2 ರವರುಗಳು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

4) **ಆಪಾದಿತ ಸರ್ಕಾರಿ ನೌಕರ–1 ಶ್ರೀ ಮಹಾಲಿಂಗ,** ವಾಹನ ಚಾಲಕರು ದಿನಾಂಕ 30/01/2018 ರಂದು ತಮ್ಮ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿ ತಾವು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲವೆಂದು ತಮ್ಮನ್ನು ಈ ದೋಷಾರೋಪಣೆಯಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ. **ಆಪಾದಿತ ಸರ್ಕಾರಿ ನೌಕರ–2 ಶ್ರೀ ಪಿ.ಎಸ್. ಪುಟ್ಟೇಗೌಡ,** ಹಿಂದಿನ ಕಾರ್ಯದರ್ಶಿ ರವರು ತಮ್ಮ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

5) **ಆಪಾದಿತ ಸರ್ಕಾರಿ ನೌಕರ–2 ಶ್ರೀ ಪಿ.ಎಸ್. ಪುಟ್ಟೇಗೌಡ** ರವರು ದಿನಾಂಕ 18.08.2018 ರಿಂದ 14.12.2018 ರವರೆಗೆ ನಿರಂತರವಾಗಿ ಈ ವಿಚಾರಣಾ ಪ್ರಾಧಿಕಾರದ ಮುಂದೆ ಹಾಜರಾಗದೇ ಯಾವುದೇ ರಕ್ಷಣಾ ಹೇಳಿಕೆಯನ್ನು ಸಹ ಸಲ್ಲಿಸಿರುವುದಿಲ್ಲ ಸದರಿಯವರನ್ನು **ಏಕತರ್ಫಿ** ಎಂದು ಪರಿಗಣಿಸಲಾಗಿರುತ್ತದೆ ಹಾಗೂ ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಅಥವಾ ದಾಖಲೆಗಳನ್ನಾಗಲಿ ಗುರುತಿಸಿಕೊಂಡಿರುವುದಿಲ್ಲ.

6) ದಿನಾಂಕ 14.01.2021 ರಂದು ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರಲ್ಲಿ ಆ.ಸ.ನೌ–3 **ಶ್ರೀ ಕೆ.ಸಿ. ಕೃಷ್ಣ,** ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆರವರು ರವರು ಸಲ್ಲಿಸಿದ್ದ ಅರ್ಜಿ ಸಂಖ್ಯೆ 4578/2017 ರಲ್ಲಿ 12(3) ವರದಿ ಮತ್ತು ವಿಚಾರಣೆಗೆ ವಹಿಸುವ ಸರ್ಕಾರಿ ಆದೇಶವನ್ನು ಪ್ರಶ್ನಿಸಿದ್ದು ದಿನಾಂಕ 14.01.2021 ರಂದು ಕರ್ನಾಟಕ ಆಡಳಿತ ನ್ಯಾಯಮಂಡಳಿ ತನ್ನ ಆದೇಶದಲ್ಲಿ ಸದರಿ **12(3) ವರದಿ ಮತ್ತು ಸರ್ಕಾರಿ ಆದೇಶವನ್ನು ವಜಾಗೊಳಿಸಿದ್ದು,** ಸದರಿ ಆದೇಶದ ವಿರುದ್ಧ ಲೋಕಾಯುಕ್ತ ಸಂಸ್ಥೆಯು ರಿಟ್ ಅರ್ಜಿ ಸಲ್ಲಿಸುವುದು ಬೇಡವೆಂದು ತೀರ್ಮಾನಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ದಿನಾಂಕ 31/01/2022 ರಂದು ಒಪ್ಪಿಗೆ ನೀಡಿರುವುದರಿಂದ **ಆಪಾದಿತ ಸರ್ಕಾರಿ ನೌಕರ–3 ರವರನ್ನು ಈ ವಿಚಾರಣೆಯಿಂದ ಕೈಬಿಡಲಾಗಿದೆ.**

7) ಈ ವಿಚಾರಣೆಯಲ್ಲಿ, ಆ.ಸ.ನೌ–1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ **ಶ್ರೀ ಬಿ.ಆರ್. ರವಿಚಂದ್ರ** ರವರನ್ನು ಪಿ.ಡಬ್ಲ್ಯೂ–1 ಮತ್ತು **ಶ್ರೀ ಬೆಟ್ಟಸ್ವಾಮಿ ಗೌಡ,** ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ನಾಗಮಂಗಲ ತಾಲ್ಲೂಕು ಪಂಚಾಯತಿ ರವರನ್ನು ಪಿಡಬ್ಲ್ಯೂ–2 ಎಂದು ಸಾಕ್ಷಿ ನುಡಿಸಿಕೊಂಡು ನಿ.ಪಿ–1 ಮತ್ತು ನಿ.ಪಿ–15 ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ–1 ರವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಅನ್ನು ದಿನಾಂಕ 26/10/2021 ರಂದು ಪಡೆದುಕೊಳ್ಳಲಾಗಿರುತ್ತದೆ. ಆ.ಸ.ನೌ–2 ರವರು ಏಕತರ್ಫಿಯಾಗಿರುವುದರಿಂದ ಸದರಿಯವರ ದ್ವಿತೀಯ ಮೌಖಿಕ ಹೇಳಿಕೆ (Second Oral Statement)ಅನ್ನು ತೆಗೆದುಕೊಳ್ಳಲಾಗಿರುವುದಿಲ್ಲ.

8) ಆ.ಸ.ನೌ–2 ರವರು ರಕ್ಷಣಾ ಹೇಳಿಕೆಯನ್ನು ಸಲ್ಲಿಸದೆ ಏಕತರ್ಫಿಯಾಗಿದ್ದು, ತಮ್ಮ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನಾಗಲಿ, ಅಥವಾ ದಾಖಲೆಗಳನ್ನಾಗಲಿ ಗುರುತಿಸಿಕೊಂಡಿರುವುದಿಲ್ಲ.

9) ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳ ವಾದವಿವಾದವನ್ನು ಆಲಿಸಲಾಯಿತು.

10) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ಮತ್ತು 2 ರವರುಗಳ ಮೇಲೆ ಆಪಾದಿಸಲಾದ ಆರೋಪವನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

11) ವಾದವಿವಾದ ಆಲಿಸಿದ ನಂತರ ಕಡವನ್ನು ಪರಿಶೀಲಿಸಲಾಯಿತು, ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ:

**ಅಂಶ–1)** **ಸಕಾರಾತ್ಮಕವಾಗಿ.**

**ಅಂಶ–2)** ಅಂತಿಮ ಆದೇಶದಂತೆ.

## ಕಾರಣಗಳು

13) **ಅಂಶ–1:** ಈ ವಿಚಾರಣೆಯಲ್ಲಿ, ಆ.ಸ.ನೌ–1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರಾದ **ಶ್ರೀ ಬಿ.ಆರ್. ರವಿಚಂದ್ರ** ರವರನ್ನು ಪಿ.ಡಬ್ಲ್ಯೂ–1 ಮತ್ತು **ಶ್ರೀ ಬೆಟ್ಟಸ್ವಾಮಿ ಗೌಡ,** ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ನಾಗಮಂಗಲ ತಾಲ್ಲೂಕು ಪಂಚಾಯತಿ ರವರನ್ನು ಪಿಡಬ್ಲ್ಯೂ–2 ಎಂದು ಸಾಕ್ಷಿ ನುಡಿಸಿಕೊಂಡು **ನಿ.ಪಿ–1 ಮತ್ತು ನಿ.ಪಿ–15** ರವರೆಗಿನ ದಾಖಲೆಗಳನ್ನು ತಮ್ಮ ಪರವಾಗಿ ಗುರುತಿಸಿಕೊಂಡಿರುತ್ತಾರೆ.

14) ದೂರುದಾರ ಪಿಡಬ್ಲ್ಯೂ–1 **ಶ್ರೀ. ಬಿ.ಆರ್. ರವಿಚಂದ್ರ** ರವರು ತಮ್ಮ ಮುಖ್ಯವಿಚಾರಣೆಯಲ್ಲಿ, ತಾನು ದಿನಾಂಕ 30.01.2013 ರಂದು ಲೋಕಾಯುಕ್ತ ಕಛೇರಿಗೆ ಪ್ರಪತ್ರ–1 (ದೂರು), ಪ್ರಪತ್ರ–2 (ಪ್ರಮಾಣ ಪತ್ರ) ರಲ್ಲಿ ದೂರು ಸಲ್ಲಿಸಿದ್ದು ಅದು **ನಿ.ಪಿ–1 ಮತ್ತು 2 ಎಂದು,** ನಾಗಮಂಗಲ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ವೆ ನಂ. 40 ರಲ್ಲಿ 5 ಎಕರೆ ಜಾಗವನ್ನು ಗುಡಿಸಲು ನಿರ್ಮಿಸುವವರಿಗೆ ನೀಡಲು ಜಿಲ್ಲಾಧಿಕಾರಿಯವರು ಆದೇಶ ಮಾಡಿದ್ದು, ಆದರೆ ಗುಡಿಸಲಿನಲ್ಲಿ ವಾಸ ಮಾಡದವರಿಗೂ ಸಹ ಸ್ವತ್ತಿನ ಹಕ್ಕುಪತ್ರ ನೀಡಿರುವುದಾಗಿ ಹಾಗೂ ಆಪಾದಿತ ಸರ್ಕಾರಿ ನೌಕರ–1 ಅವರ **ಪತ್ನಿ ಶ್ರೀಮತಿ ಜಯಲಕ್ಷ್ಮಿ,** ಶ್ರೀಮತಿ ಸವಿತಾ ಕೋಂ

ಮಂಜುನಾಥ, ಶ್ರೀಮತಿ ಡಿ.ಎನ್. ಶೋಭಾ, ಶ್ರೀ ಡಿ.ಬಿ. ಚಂದ್ರಶೇಖರಯ್ಯ (ಕಾರ್ಯನಿರ್ವಹಣಾಧಿಕಾರಿ) ರವರುಗಳಿಗೆ ನೀಡಿರುವುದಾಗಿ ತಿಳಿದುಬಂದಿರುತ್ತದೆಂದು ಸಾಕ್ಷ್ಯ ನುಡಿದಿರುತ್ತಾರೆ.

15) ಪಿಡಬ್ಲ್ಯೂ-1 ದೂರುದಾರರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ತಾನು ದಿನಾಂಕ 19.01.2015 ರಂದು ಎದುರುದಾರರು ಸಲ್ಲಿಸಿದ್ದ ಆಕ್ಷೇಪಣೆಗೆ ಪ್ರತ್ಯುತ್ತರವನ್ನು **ನಿ.ಪಿ-3 ರಂತೆ** ನೀಡಿರುವುದಾಗಿ ಹಾಗೂ ಮೇಲ್ಕಂಡ ಸರ್ಕಾರಿ ನೌಕರರುಗಳು ಈ ಕರ್ತವ್ಯಲೋಪಕ್ಕೆ ಕಾರಣಕರ್ತರೆಂದು ಸಾಕ್ಷ್ಯ ನುಡಿದಿರುತ್ತಾರೆ.

16) ಪಿಡಬ್ಲ್ಯೂ-2 ಶ್ರೀ ಬೆಟ್ಟಸ್ವಾಮಿ ಗೌಡ, ಕಾರ್ಯನಿರ್ವಾಹಕ ಅಧಿಕಾರಿ, ನಾಗಮಂಗಲರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾನು 05.03.2014 ರಿಂದ 31.07.2016 ರವರೆಗೆ ನಾಗಮಂಗಲ ತಾಲ್ಲೂಕಿನಲ್ಲಿ ನಾಗಮಂಗಲ ತಾಲ್ಲೂಕು ಪಂಚಾಯತಿಯಲ್ಲಿ ಕಾರ್ಯನಿರ್ವಹಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಆ ಸಮಯದಲ್ಲಿ ಕರ್ನಾಟಕ ಲೋಕಾಯುಕ್ತ ಕೇಂದ್ರ ಕಛೇರಿಯಿಂದ ಕಳುಹಿಸಿದ ದೂರನ್ನು ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸಲು ಸೂಚಿಸಿದ್ದರಿಂದ ಅದರಂತೆ ದೂರು ಮತ್ತು ದಾಖಲಾತಿಗಳನ್ನು ಪರಿಶೀಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಶ್ರೀಮತಿ ಜಯಲಕ್ಷ್ಮಿ ಕೋಂ ಮಹಾಲಿಂಗ, ಶ್ರೀಮತಿ ಶೋಭಾ ಕೋಂ ಸುಂದರ್‌ರಾಜ್ ಮತ್ತು ಶ್ರೀ ಬಿ.ಸವಿತಾ ಕೋಂ ಮಂಜುನಾಥ್ ರವರುಗಳಿಗೆ ನಿವೇಶನ ಹಕ್ಕುಪತ್ರವನ್ನು ನಿ.ಪಿ-5 ರಿಂದ 7 ರಂತೆ ನೀಡಿದ್ದು, ಅನುಮೋದನೆ ಆಗದಿರುವ ನಿವೇಶನದ ನಕ್ಷೆ ನಿ.ಪಿ-8 ಎಂದು ಗುರುತು ಮಾಡಲಾಗಿರುತ್ತದೆ.

17) ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಟ್ಯಾಕ್ಸ್ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್ ನಿ.ಪಿ-9, ಸದರಿ ಟ್ಯಾಕ್ಸ್ ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಶ್ರೀಮತಿ ಜಯಲಕ್ಷ್ಮಿ ರವರಿಗೆ ಸಂಬಂಧಿಸಿದಂತೆ ಬಿಳಿ ಹಾಳೆಯಲ್ಲಿ ಬರೆದು ಸೇರಿಸಿದ್ದು ಅದನ್ನು ನಿ.ಪಿ-10 ಎಂದು, ಶ್ರೀಮತಿ ಶೋಭಾರವರ ಅರ್ಜಿಯ ಪ್ರತಿ ಮತ್ತು ಎಮ್.ಆರ್. ಪ್ರತಿ ನಿ.ಪಿ-11 ಎಂದು, ಟ್ಯಾಕ್ಸ್ ಡಿಮಾಂಡ್ ರಿಜಿಸ್ಟರ್ ಎಕ್ಸ್‌ಟ್ರ್ಯಾಕ್ಟ್ ಅನ್ನು ನಿ.ಪಿ-12 ಮತ್ತು ಶ್ರೀಮತಿ ಶೋಭಾ ರವರಿಗೆ ಸಂಬಂಧಿಸಿದಂತೆ ಬಿಳಿ ಹಾಳೆಯಲ್ಲಿ ಬರೆದು ಸೇರಿಸಿದ್ದು, ಅದನ್ನು ನಿ.ಪಿ-13 ಎಂದು ಗುರುತು ಮಾಡಲಾಗಿರುತ್ತದೆ.

18) ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಶ್ರೀಮತಿ ಸವಿತಾ ರವರ ಅರ್ಜಿಯ ಪ್ರತಿ, ಅನುಮೋದನೆಯಾಗದಿರುವ ನಿವೇಶನ ನಕ್ಷೆ, ಎಂ.ಆರ್. ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್‌ಟ್ರ್ಯಾಕ್ಟ್ ಬಿಳಿಯ ಹಾಳೆಯ ಮೇಲೆ ಅನದ ಡಿಮ್ಯಾಂಡ್ ರಿಜಿಸ್ಟರ್‌ನ ಎಕ್ಸ್‌ಟ್ರ್ಯಾಕ್ಟ್ ನ್ನು ಒಟ್ಟಾಗಿ ನಿ.ಪಿ-14 ಎಂದು ಗುರುತು

ea 16/3

ಮಾಡಲಾಗಿರುತ್ತದೆ. ನಿವೇಶನ ಹಕ್ಕು ಪತ್ರಗಳನ್ನು ಶ್ರೀಮತಿ ಜಯಲಕ್ಷ್ಮಿ, ಶ್ರೀಮತಿ ಸವಿತಾ ಮತ್ತು ಶ್ರೀಮತಿ ಶೋಭಾರವರುಗಳಿಗೆ ವಿತರಣೆ ಮಾಡಿದ್ದು ಮತ್ತು ಶ್ರೀಮತಿ ಜಯಲಕ್ಷ್ಮಿರವರು ದಿನಾಂಕ 20.06.2008 ರಂದು ಆಪಾದಿತ ಸರ್ಕಾರಿ ನೌಕರ–2 ಶ್ರೀ ಪಿ.ಎಸ್. ಪುಟ್ಟೇಗೌಡ, ಹಿಂದಿನ ಕಾರ್ಯದರ್ಶಿರವರಿಗೆ ಅರ್ಜಿ ನೀಡಿ ನಿವೇಶನ ಸಂಖ್ಯೆ 74 ನ್ನು ತನ್ನ ಹೆಸರಿಗೆ ಖಾತೆ ಮಾಡಲು ಕೋರಿದ್ದು, ಸದರಿ ಅರ್ಜಿಯ ಪ್ರತಿಯನ್ನು ನಿ.ಪಿ–15 ಎಂದು, **ಆಪಾದಿತ ಸರ್ಕಾರಿ ನೌಕರ–2 ಹಿಂದಿನ ಸದರಿ ಗ್ರಾಮಪಂಚಾಯತಿ ಕಾರ್ಯದರ್ಶಿರವರು ಸರಿಯಾಗಿ ಪರಿಶೀಲಿಸದೆ ಕಾನೂನುಬಾಹಿರವಾಗಿ ಶ್ರೀ ಜಯಲಕ್ಷ್ಮಿ ರವರ ಹೆಸರನ್ನು ಸಿರಿಯಲ್ ನಂ. 337 ರಲ್ಲಿ, ಶ್ರೀಮತಿ ಸಾವಿತ್ರಿ ರವರ ಹೆಸರನ್ನು ಸಿರಿಯಲ್ ನಂ. 355 ರಲ್ಲಿ ಮತ್ತು ಶ್ರೀಮತಿ ಶೋಭಾ ರವರ ಹೆಸರನ್ನು ಸಿರಿಯಲ್ ನಂ. 373 ರಲ್ಲಿ ಪ್ರಿಂಟ್ ಮಾಡದ ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಬರೆದು ಖಾತಾ ಮಾಡಿರುತ್ತಾರೆ.** ಅದರಂತೆ, ತಾವು ದಿನಾಂಕ 18.04.2015 ರಂದು ನಿ.ಪಿ–16 ರಂತೆ ವರದಿ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**19) ಪಿಡಬ್ಲ್ಯೂ–2 ರವರನ್ನು ಆಪಾದಿತ ಸರ್ಕಾರಿ ನೌಕರ–1 ರವರ ಪರ ರಕ್ಷಣಾ ಸಹಾಯಕರವರು ಪಾಟೀ ಸವಾಲು ಮಾಡಿದಾಗ ಈ ಕೆಳಕಂಡ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ:–**

> ಶ್ರೀಮತಿ ಜಯಲಕ್ಷ್ಮಿ ಕೊಂ ಮಹಾಲಿಂಗ (ಡಿಜಿಪಿ–1) ರವರ ಪ್ರಮಾಣ ಪತ್ರದ ಪ್ರತಿ ನಿ.ಡಿ–1 ಎಂದು, ಶ್ರೀಮತಿ ಜಯಲಕ್ಷ್ಮಿ ರವರ ಚುನಾವಣಾ ಗುರುತಿನ ಚೀಟಿಯ ಪ್ರತಿ ನಿ.ಡಿ–2 ಎಂದು, ಆಹಾರ ಪಡಿತರ ಚೀಟಿಯಲ್ಲಿ ಜಯಲಕ್ಷ್ಮಿ ಮತ್ತು ಮಹಾಲಿಂಗಯ್ಯರವರ ಪೋಟೋ ನಿ.ಪಿ–3, ಶ್ರೀ ಮಹಾಲಿಂಗಯ್ಯ ರವರ ಚುನಾವಣಾ ಗುರುತಿನ ಚೀಟಿಯ ಪ್ರತಿ ನಿ.ಪಿ–4, ಶ್ರೀಮತಿ ಜಯಲಕ್ಷ್ಮಮ್ಮ ರವರ ಚುನಾವಣಾ ಗುರುತಿನ ಚೀಟಿಯ ಪ್ರತಿ ನಿ.ಪಿ–5, ಶ್ರೀಮತಿ ಜಯಲಕ್ಷ್ಮಮ್ಮರವರ ಆಧಾರ ಕಾರ್ಡಿನ ಪ್ರತಿ ನಿ.ಪಿ–6, ಶ್ರೀ ಮಹಾಲಿಂಗಯ್ಯರವರ ಆಧಾರ ಕಾರ್ಡಿನ ಪ್ರತಿ ನಿ.ಪಿ–7, ವಂಶವೃಕ್ಷ ಪ್ರಮಾಣ ಪತ್ರದ ಪ್ರತಿ ನಿ.ಪಿ–8 ಮತ್ತು ಶ್ರೀಮತಿ ಜಯಲಕ್ಷ್ಮಮ್ಮರವರ ಪಾನ್ ಕಾರ್ಡ್ ಪ್ರತಿ ನಿ.ಪಿ–9 ಗುರುತಿಸಿಕೊಂಡಿರುತ್ತಾರೆ.

ಸದರಿ ದಾಖಲಾತಿಗಳ ಬಗ್ಗೆ ಆಪಾದಿತ ಸರ್ಕಾರಿ ನೌಕರ–1 ಪರ ರಕ್ಷಣಾ ಸಹಾಯಕರು ಪಿಡಬ್ಲ್ಯೂ–2 ರವರನ್ನು ಪಾಟೀ ಸವಾಲು ಮಾಡಿದಾಗ ಆಪಾದಿತ ಸರ್ಕಾರಿ ನೌಕರರಿಗೆ ಅನುಕೂಲವಾಗುವ ಯಾವುದೇ ಅಂಶಗಳು ಕಂಡು ಬಂದಿರುವುದಿಲ್ಲ.

20) ದೂರುದಾರರ ದೂರು, ಪಿ.ಡಬ್ಲ್ಯೂ-1 ಮತ್ತು ಪಿ.ಡಬ್ಲ್ಯೂ-2 ಯವರುಗಳ ಸಾಕ್ಷ್ಯ **ನಿ.ಪಿ-1 ರಿಂದ 16** ರ ದಾಖಲಾತಿಗಳು ಹಾಗೂ ಪಿಡಬ್ಲ್ಯೂ-2 ರವರ ಪಾಟೀ ಸವಾಲಿನಲ್ಲಿ ಆಪಾದಿತ ಸರ್ಕಾರಿ ನೌಕರ-1 ರವರ ಪರ ರಕ್ಷಣಾ ಸಹಾಯಕರು ಗುರುತಿಸಿಕೊಂಡಿರುವ ನಿ.ಡಿ-1 ರಿಂದ ನಿ.ಡಿ-9 ರ ದಾಖಲಾತಿಗಳು ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಲಾಗಿ, ನಾಗಮಂಗಲ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ವೆ ನಂ. 40 ರಲ್ಲಿ 5 ಎಕರೆ ಜಾಗವನ್ನು ಗುಡಿಸಲು ನಿರ್ಮಿಸುವವರಿಗೆ ನಿವೇಶನ ನೀಡಲು ಜಿಲ್ಲಾಧಿಕಾರಿಯವರು **ನಿ.ಪಿ-4 ರಂತೆ** ದಿನಾಂಕ 07.02.2005 ರಂದು ಆದೇಶ ಮಾಡಿದ್ದು, ಆದರೆ ಗುಡಿಸಲು ನಿರ್ಮಿಸದವರಿಗೂ ಸಹ ಸ್ವತ್ತಿನ ಹಕ್ಕುಪತ್ರ ನೀಡಿರುವುದಾಗಿ ಹಾಗೂ ಆಪಾದಿತ ಸರ್ಕಾರಿ ನೌಕರ-1 ಅವರ **ಪತ್ನಿ ಶ್ರೀಮತಿ ಜಯಲಕ್ಷ್ಮಿ, ಶ್ರೀಮತಿ ಸವಿತಾ** ಕೋಂ ಮಂಜುನಾಥ, **ಶ್ರೀಮತಿ ಡಿ.ಎನ್. ಶೋಭಾ,** ಶ್ರೀ ಡಿ.ಬಿ. ಚಂದ್ರಶೇಖರಯ್ಯ (ಕಾರ್ಯನಿರ್ವಹಣಾಧಿಕಾರಿ) ರವರುಗಳಿಗೆ ನಿವೇಶನ ನೀಡಿದ್ದು, ಆದ್ದರಿಂದ ದೂರುದಾರರು **ನಿ.ಪಿ-1 ಮತ್ತು 2** ರಂತೆ ದಿನಾಂಕ 30.01.2013 ರಂದು ಲೋಕಾಯುಕ್ತ ಕಛೇರಿಗೆ ದೂರು ಸಲ್ಲಿಸಿದ್ದು, **ಸದರಿ ಕರ್ತವ್ಯ ಲೋಪಕ್ಕೆ ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರುಗಳು ಕಾರಣಕರ್ತರೆಂದು ಸ್ಪಷ್ಟಪಡಿಸಿರುತ್ತಾರೆ.**

**21)** ಸದರಿ ದೂರಿನ ತನಿಖೆಯನ್ನು ಶ್ರೀ ಬೆಟ್ಟಸ್ವಾಮಿ ಗೌಡ, ಕಾರ್ಯನಿರ್ವಾಹಕ ಅಧಿಕಾರಿ, ನಾಗಮಂಗಲರವರು ಕೈಗೊಂಡು ದೂರು ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ್ದು, **ಶ್ರೀಮತಿ ಜಯಲಕ್ಷ್ಮಿ ಕೋಂ ಮಹಾಲಿಂಗ, ಶ್ರೀಮತಿ ಶೋಭಾ ಕೋಂ ಸುಂದರ್‌ರಾಜ್** ಮತ್ತು ಶ್ರೀ **ಬಿ.ಸವಿತಾ ಕೋಂ ಮಂಜುನಾಥ್ ರವರುಗಳಿಗೆ** ನಿವೇಶನ ಹಕ್ಕುಪತ್ರವನ್ನು **ನಿ.ಪಿ-5 ರಿಂದ 7 ರಂತೆ ಹಕ್ಕು ಪತ್ರಗಳನ್ನು ನೀಡಿರುವುದು ಕಂಡು ಬಂದಿರುವುದಾಗಿ,** ನಿ.ಪಿ-9 ಟ್ಯಾಕ್ಸ್ ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ **ಶ್ರೀಮತಿ ಜಯಲಕ್ಷ್ಮಿ** ರವರಿಗೆ ಸಂಬಂಧಿಸಿದಂತೆ ಬಿಳಿ ಹಾಳೆಯಲ್ಲಿ ಬರೆದು ನಿ.ಪಿ-10 ರಂತೆ ಸೇರಿಸಿರುವುದು ಕಂಡು ಬರುತ್ತದೆಂದು, ಹಾಗೂ **ಶ್ರೀಮತಿ ಶೋಭಾರವರ ಅರ್ಜಿಯ** ಪ್ರತಿ ಮತ್ತು ಎಮ್.ಆರ್. ಪ್ರತಿ ನಿ.ಪಿ-11 ಆಗಿದ್ದು, ಟ್ಯಾಕ್ಸ್ ಡಿಮಾಂಡ್ ರಿಜಿಸ್ಟರ್ ಎಕ್ಸ್‌ಟ್ರ್ಯಾಕ್ಟ್ ಅನ್ನು ನಿ.ಪಿ-12 ಮತ್ತು ಶ್ರೀಮತಿ ಶೋಭಾ ರವರಿಗೆ ಸಂಬಂಧಿಸಿದಂತೆ ಬಿಳಿ ಹಾಳೆಯಲ್ಲಿ ಬರೆದು ನಿ.ಪಿ-13 ರಂತೆ ಸೇರಿಸಿರುವುದು ಹಾಗೂ **ಶ್ರೀಮತಿ ಸವಿತಾ** ರವರ ಅರ್ಜಿಯ ಪ್ರತಿ, ಅನುಮೋದನೆಯಾಗದಿರುವ ನಿವೇಶನ ನಕ್ಷೆ, ಎಂ.ಆರ್. ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್‌ಟ್ರ್ಯಾಕ್ಟ್ ಬಿಳಿಯ ಹಾಳೆಯ ಮೇಲೆ ಡಿಮ್ಯಾಂಡ್ ರಿಜಿಸ್ಟರ್‌ನ ಎಕ್ಸ್‌ಟ್ರ್ಯಾಕ್ಟ್ ನ್ನು ಒಟ್ಟಾಗಿ ನಿ.ಪಿ-14 ಎಂದು ಗುರುತು ಮಾಡಿರುವುದು ಕಂಡುಬಂದಿರುತ್ತದೆಂದು ಹಾಗೂ ಸದರಿಯವರುಗಳಿಗೆ ನಿವೇಶನ ಹಕ್ಕು ಪತ್ರಗಳನ್ನು ಶ್ರೀಮತಿ

**ಜಯಲಕ್ಷ್ಮಿ, ಶ್ರೀಮತಿ ಸವಿತಾ ಮತ್ತು ಶ್ರೀಮತಿ ಶೋಭಾರವರುಗಳಿಗೆ ವಿತರಣೆ ಮಾಡಿರುವುದು** ಕಂಡು ಬಂದಿರುತ್ತದೆ.

22) ಶ್ರೀಮತಿ ಜಯಲಕ್ಷ್ಮಿರವರು ದಿನಾಂಕ 20.06.2008 ರಂದು ಆಪಾದಿತ ಸರ್ಕಾರಿ ನೌಕರ-2 ಶ್ರೀ ಪಿ.ಎಸ್. ಪುಟ್ಟೇಗೌಡ, ಹಿಂದಿನ ಕಾರ್ಯದರ್ಶಿರವರಿಗೆ ಅರ್ಜಿ ನಿ.ಪಿ-15 ರಂತೆ ನೀಡಿ ನಿವೇಶನ ಸಂಖ್ಯೆ 74 ನ್ನು ತನ್ನ ಹೆಸರಿಗೆ ಖಾತೆ ಮಾಡಲು ಕೋರಿದ್ದು, **ಆಪಾದಿತ ಸರ್ಕಾರಿ ನೌಕರ-2 ಹಿಂದಿನ ಸದರಿ ಗ್ರಾಮ ಪಂಚಾಯತಿ ಕಾರ್ಯದರ್ಶಿರವರು ಸರಿಯಾಗಿ ಪರಿಶೀಲಿಸದೆ ಕಾನೂನುಬಾಹಿರವಾಗಿ ಶ್ರೀ ಜಯಲಕ್ಷ್ಮಿ ರವರ ಹೆಸರನ್ನು ಸಿರಿಯಲ್ ನಂ. 337 ರಲ್ಲಿ, ಶ್ರೀಮತಿ ಸಾವಿತ್ರಿ ರವರ ಹೆಸರನ್ನು ಸಿರಿಯಲ್ ನಂ. 355 ರಲ್ಲಿ ಮತ್ತು ಶ್ರೀಮತಿ ಶೋಭಾ ರವರ ಹೆಸರನ್ನು ಸಿರಿಯಲ್ ನಂ. 373 ರಲ್ಲಿ ಪ್ರಿಂಟ್ ಮಾಡದ ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಬರೆದು ಖಾತಾ ಮಾಡಿಕೊಟ್ಟಿರುವುದು ಕಂಡು ಬರುತ್ತದೆ.**

23) ಮೇಲ್ಕಂಡ ಅಂಶಗಳಿಂದ, ನಾಗಮಂಗಲ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಸರ್ವೆ ನಂ. 40 ರಲ್ಲಿ 5 ಎಕರೆ ಜಾಗವನ್ನು ಗುಡಿಸಲು ನಿರ್ಮಿಸುವವರಿಗೆ ನೀಡಲು ಜಿಲ್ಲಾಧಿಕಾರಿಯವರು ದಿನಾಂಕ 07/02/2005 ರಂದು ನಿ.ಪಿ-4 ರಂತೆ ಆದೇಶ ಮಾಡಿದ್ದು, ಅದರಂತೆ, ತಹಶೀಲ್ದಾರ್ ರವರು ಸದರಿ ಜಮೀನಿನಲ್ಲಿ ಗುಡಿಸಲನ್ನು ನಿರ್ಮಿಸುವವರಿಗೆ ಪಹಣಿಯನ್ನು ಮಾಡಿರುವುದು ಕಂಡು ಬರುತ್ತದೆ. 1ನೇ ಆಪಾದಿತ ಸರ್ಕಾರಿ ನೌಕರ-1 ಶ್ರೀ ಮಹಾಲಿಂಗ, ವಾಹನ ಚಾಲಕರು, ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ನಾಗಮಂಗಲ ತಾಲ್ಲೂಕು ರವರು ಸರ್ಕಾರಿ ನೌಕರರಾಗಿದ್ದರೂ ಸಹ ಅವರ ಪತ್ನಿಯ ಹೆಸರಿಗೆ (1) **ಶ್ರೀಮತಿ ಜಯಲಕ್ಷ್ಮೀರವರಿಗೆ** ಹಾಗೂ **(2) ಶ್ರೀಮತಿ ಸವಿತಾ ಮತ್ತು (3) ಶ್ರೀಮತಿ ಡಿ.ಎನ್. ಶೋಭಾ** ರವರುಗಳಿಗೆ ಸರ್ಕಾರಿ ನೌಕರರ ಹೆಂಡತಿಗೆ ಹಾಗೂ ಆರ್ಥಿಕವಾಗಿ ಸದೃಡವಾಗಿರುವವರಿಗೆ ದಿನಾಂಕ 12/08/2005 ರಂದು ಹಕ್ಕುಪತ್ರಗಳನ್ನು **ನಿ.ಪಿ-5 ರಿಂದ ನಿ.ಪಿ-7 ರಂತೆ** ನೀಡಿರುವುದು ವಿಚಾರಣೆಯಿಂದ ಸಾಭೀತಾಗಿರುತ್ತದೆ.

24) 1ನೇ ಆಪಾದಿತರ ಪತ್ನಿ ಶ್ರೀಮತಿ ಜಯಲಕ್ಷ್ಮೀರವರು **2ನೇ ಸರ್ಕಾರಿ ಆಪಾದಿತ ನೌಕರ ಶ್ರೀ ಪಿ.ಎಸ್. ಪುಟ್ಟೇಗೌಡ,** ಹಿಂದಿನ ಕಾರ್ಯದರ್ಶಿ, ಜವರನಹಳ್ಳಿ ಗ್ರಾಮ ಪಂಚಯತ್, ಬೆಳ್ಳೂರು ಹೋಬಳಿ ನಾಗಮಂಗಲ ತಾಲ್ಲೂಕು ರವರಿಗೆ ದಿನಾಂಕ 20/06/2008 ರಂದು ಅರ್ಜಿ ನಿ.ಪಿ-15 ರಂತೆ ಅರ್ಜಿ ಸಲ್ಲಿಸಿದ್ದು, ಆ.ಸ.ನೌ-2 ರವರು ಸರಿಯಾಗಿ ಪರಿಶೀಲಿಸದೆ ಕಾನೂನುಬಾಹಿರವಾಗಿ ಶ್ರೀ ಜಯಲಕ್ಷ್ಮಿ ರವರ ಹೆಸರನ್ನು ಸಿರಿಯಲ್ ನಂ. 337 ರಲ್ಲಿ, ಶ್ರೀಮತಿ ಸಾವಿತ್ರಿ ರವರ ಹೆಸರನ್ನು ಸಿರಿಯಲ್ ನಂ. 355 ರಲ್ಲಿ ಮತ್ತು ಶ್ರೀಮತಿ ಶೋಭಾ ರವರ ಹೆಸರನ್ನು ಸಿರಿಯಲ್ ನಂ. 373 ರಲ್ಲಿ ಪ್ರಿಂಟ್ ಮಾಡದ ಡಿಮ್ಯಾಂಡ್

ev, 013

ರಿಜಿಸ್ಟರ್‌ನಲ್ಲಿ ಬರೆದು ಖಾತಾ ಮಾಡಿಕೊಟ್ಟಿರುವುದನ್ನು ಶಿಸ್ತು ಪ್ರಾಧಿಕಾರವು ಮಂಡನಾಧಿಕಾರಿಗಳ ಮುಖಾಂತರ ಸಾಕ್ಷ್ಯಾಧಾರ ನೀಡಿ ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆಂದು ತೀರ್ಮಾನಿಸಲಾಗಿದೆ. ಆದ್ದರಿಂದ ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರುಗಳು ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡಿರುವುದರಿಂದ ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಾವಳಿಗಳು-1966ರ ನಿಯಮ 3(1) ದುರ್ನಡತೆ ಎಸಗಿರುವುದು ಸಾಬೀತಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ **ಅಂಶ-1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

ಶಿಸ್ತು ಪ್ರಾಧಿಕಾರದವರು ಆಪಾದಿತ ಸರ್ಕಾರಿ ನೌಕರ-1 ಶ್ರೀ **ಮಹಾಲಿಂಗ,** ವಾಹನ ಚಾಲಕರು, ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ನಾಗಮಂಗಲ ತಾಲ್ಲೂಕು ಪಂಚಾಯತ್, ಮಂಡ್ಯ ಜಿಲ್ಲೆ, **ಆ.ಸ.ನೌ-2 ಶ್ರೀ ಪಿ.ಎಸ್. ಪುಟ್ಟೇಗೌಡ,** ಹಿಂದಿನ ಕಾರ್ಯದರ್ಶಿ, ಜವರನಹಳ್ಳಿ ಗ್ರಾಮ ಪಂಚಾಯತ್, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ (**ಏಕತರ್ಫಿ**) ರವರುಗಳ ವಿರುದ್ಧ ಹೊರಿಸಲಾದ ಆರೋಪವನ್ನು **ರುಜುವಾತುಪಡಿಸಲಾಗಿದೆ** ಹಾಗೂ ಆಪಾದಿತ ಸರ್ಕಾರಿ ನೌಕರ-3 ಶ್ರೀ **ಕೆ.ಸಿ. ಕೃಷ್ಣ,** ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ ರವರ ವಿರುದ್ಧದ ದೋಷಾರೋಪಣೆಯಿಂದ ಕೈಬಿಡಲಾಗಿದೆ ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**16ನೇ ಮಾರ್ಚ್ 2022.**

**(ಜಿ. ನಂಜುಂಡಯ್ಯ)**
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. B.R. Ravichandra (Complainant) (original)<br>PW-2 : Sri. Bettaswamy Gowda, Retired Executive Officer, Nagamangala Taluk Panchayath. (original) | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex. P-1: | Form No. I (complaint) dated 30/01/2013. (original) |
| Ex.P.2 : | Form No. II (Affidavit) dated 30/01/2013 (original) |
| Ex.P.3 : | Rejoinder of complainant dated 19/01/2015 (original) |
| Ex.P.4 : | Copy of Official Memorandum of Deputy Commissioner dated 07.05.2002. (Xerox) |
| Ex.P.5 : | Certified copy of title deeds to Smt. Jaylakshmi (certified Xerox) |
| Ex.P.6 : | Certified copy of title deeds to Smt. D.N. Shoba (certified Xerox) |
| Ex.P.7 : | Certified copy of title deeds to Smt. B. Savitha (certified Xerox) |
| Ex.P.8 : | Certified approved sketch of sites (Certified Xerox) |
| Ex.P.9 : | Certified Tax Demand Register extract in respect of Smt. Jayalakshmi (Certified Xerox) |
| Ex.P.10 : | Certified tax demand register written in white paper and inserted in the register (Certified Xerox) |
| Ex.P.11: | Certified copy of application of Smt. Shobha and M.R. Copy (Certified Xerox) |
| Ex.P.12 : | Certified Copy of Tax Demand Register extract in respect of Smt. Shobha (Certified Xerox) |

| | |
|---|---|
| Ex.P.13 : | Certified Copy of tax demand register written in white paper and inserted in the register (Certified Xerox) |
| Ex.P.14 : | Certified copy of Demand Register Extract (Certified Xerox) |
| Ex.P.15 : | Certified copy of application given by Smt. Jayalakshmi to make khatha (Certified Xerox) |
| Ex.P.16 : | Investigation Report dated 18/04/2015 of Executive Officer, Taluk Panchayath, Nagamangala. (original) |
| Ex. D.1 : | Copy of affidavit of Smt. Jayalakshmi Wife of D (Xerox) |
| Ex. D.2 : | Copy of election ID of Smt. Jayalakshmi wife of DGO (Xerox) |
| Ex. D.3 : | Copy of ration car of Mahalingaiah and Jayalakshmi with photo (Xerox) |
| Ex. D.4 : | Copy of election ID of Mahalingaiah (Xerox) |
| Ex. D.5 : | Copy of election ID of Smt. Jayalakshmamma (Xerox) |
| Ex. D.6 : | Copy of Adhar Card of Smt. Jayalakshmamma (Xerox) |
| Ex. D.7 : | Copy of Adhar Card of Sri. Mahalingaiah (Xerox) |
| Ex. D.8 : | Copy of family tree affidavit of Mahalingaiah (Xerox) |
| Ex. D.9 : | Copy of PAN card of Jayalakshmi wife of DGO (Xerox) |

DOR of DGO-1 is **31.07.2018 (Already Retired)**
DOR of DGO-2 is **30.06.2019 (Already Retired)**
DGO-3 **quashed and closed**

**(G. NANJUNDAIAH)**
Additional Registrar (Enquiries)-10
Karnataka Lokayukta,
Bengaluru.

**KARNATAKA LOKAYUKTA**

No.UPLOK-2/DE.936/2016/ARE-10

Multi Storied Building,
Dr. B.R. Ambedkar Veedhi,
Bengaluru-560 001.
Dated 17.03.2022

**RECOMMENDATION**

Sub:- Departmental inquiry against (1) Sri Mahalinga, Driver, O/o Executive Officer, Nagamangala TalukPanchayath, (2) Sri P.S.Puttegowda, the then Secretary, Javaranahalli Grama Panchayath, Belluru Hobli, Nagamangala Taluk(exparte) and (3) Sri K.C.Krishna, the then Executive Officer, Taluk Panchayath, Nagamangala(quashed)– reg.

Ref:- 1) Government Order No.RDP 54 VSB 2017 dated 28.04.2017.

2) Nomination order No. UPLOK-2/DE.936/2017 dated 10.08.2017 of Hon'ble Upalokayukta, State of Karnataka.

3) Inquiry report dated 16.03.2022 of Additional Registrar of Enquiries-10, Karnataka Lokayukta, Bengaluru.

~~~~~~

The Government by its order dated 28.04.2017 initiated the disciplinary proceedings against (1) Sri Mahalinga, Driver, O/o Executive Officer, Nagamangala Taluk Panchayath, (2) Sri P.S.Puttegowda, the then Secretary, Javaranahalli Grama Panchayath, Belluru Hobli,
~~~~~~

Nagamangala Taluk(exparte) and (3) Sri K.C.Krishna, the then Executive Officer, Taluk Panchayath, Nagamangala(quashed), [hereinafter referred to as Delinquent Government Official, for short as 'DGOs 1 to 3' respectively] and entrusted the Departmental Inquiry to this Institution.

2. This Institution by Nomination Order No. UPLOK-2/ DE.936/2017 dated 10.08.2017 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them.

3. The DGOs were tried for the charge of issuing hakkupathras to the wife of DGO.1 and further DGO.2 illegally effected change of katha in the name of wives of Govt. servants and thereby committed misconduct.

4. The Inquiry Officer (Additional Registrar of Enquiries-10) on proper appreciation of oral and documentary

evidence has held that, the Disciplinary Authority has '*proved'* the above charge against the DGO 1 Sri Mahalinga, Driver, and DGO 2 Sri P.S.Puttegowda, the then Secretary, Javaranahalli Grama Panchayath, Belluru Hobli, Nagamangala Taluk.

5. Further, on the application filed by DGO.3 Sri K.C.Krishna, the then Executive Officer before Hon'ble KAT, the Hon'ble KAT has quashed the report u/s 12(3) of Karnataka Lokayukta Act and the Govt. order entrusting enquiry against DGO.3. This Institution has taken a decision not to challenge the said order of Hon'ble KAT. Hence the enquiry against DGO.3 Sri K.C.Krishna is dropped.

5. On re-consideration of report of inquiry, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statements, the DGO-1 Sri Mahalinga has retired from service on 31.07.2018; DGO.2 Sri P.S.Puttegowda has retired from service on 30.06.2019.

7. Having regard to the nature of charge proved against DGOs and considering the totality of circumstances,

i) it is hereby recommended to the Government to impose penalty of 'withholding 15% of pension payable to DGO.1 Sri Mahalinga,(retired), the then Driver, O/o Executive Officer, Taluk Panchayath, Nagamanagala, for a period of five years.

ii) It is hereby recommended to the Government to impose penalty of ' withholding 15% of pension payable to DGO.2 Sri P.S.Puttegowda,(retired), the then Secretary, Grama Panchayath, Bellur Hobli, Nagamanagala Taluk, for a period of five years.

8. Action taken in the matter shall be intimated to this Authority.

Connected records are enclosed herewith.

Sd/- 21/3/22

(JUSTICE B.S.PATIL)
Upalokayukta-2,
State of Karnataka.